ಶ್ರೀ ಆರ್. ಎನ್ ನಾಯಕ್.—ಈ ವ್ಯವಸ್ಥೆ ಏಕೆ ? ನಿಮಗೆ ಕೇಂದ್ರ ಸರ್ಕಾರದಿಂದ ದುಡ್ಡು ಬರಬೇಕು, ಜಿಲ್ಲಾ ಪರಿಷತ್ತುಗಳಿಂದ ಆಗಬೇಕೆಂದು ಎಂದರೆ ನೀವು ಯಾಕೆ ಇರುವುದು ?

(ಮಾನ್ಯ ಸದಸ್ಯರುಗಳಾದ ಶ್ರೀ ಬಿ. ಸ್ವಾಮಿರಾವ್, ಶ್ರೀ ಪಟಮಕ್ಕಿ ರತ್ನಾಕರ್ ಮತ್ತು ಶ್ರೀ ಆರ್. ಎನ್. ನಾಯಕ್ ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು.—ಯಾವುದೂ ರೆಕಾರ್ಡ್ ಮಾಡಬೇಡಿ.

(ಗೊಂದಲ)

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ ಎಂದು ಹೇಳುತ್ತಿದ್ದೇನೆ. ಸಮಸ್ಯೆ ಏಕೆ ಹೀಗೆ ಮಾಡುತ್ತಿದ್ದೀರಿ. ಎಲ್ಲರೂ ಕುಳಿತುಕೊಳ್ಳಿ ಇಲ್ಲದಿದ್ದರೆ ನಾನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಶ್ರೀ ರಾಮಪ್ಪನವರೇ ಕುಳಿತುಕೊಳ್ಳಿ.

ಶ್ರೀ ಎಂ. ರಾಮಪ್ಪ.—ಈ ನಾಚಿಕೆಗೇಡು ಸರ್ಕಾರಕ್ಕೆ ನಾನು ಧಿಕ್ಕಾರ ಮಾಡುತ್ತೇನೆ.

(ಶ್ರೀ ಎಂ. ರಾಮಪ್ಪನವರು ಸಭೆಯಿಂದ ನಿರ್ಗಮಿಸಿದರು)

(ಸಭೆಯಲ್ಲಿ ಗೊಂದಲ. ಅನೇಕ ಸದಸ್ಯರು ಮಾತನಾಡುತ್ತಲೇ ಇದ್ದರು)

ಅಧ್ಯಕ್ಷರು.—ಯಾವುದೂ ರೆಕಾರ್ಡ್ ಆಗುವುದಿಲ್ಲ.

* * *

ಅಧ್ಯಕ್ಷರು.—ಕುಳಿತುಕೊಳ್ಳಿ ಎಂದು ನಾನು ಹೇಳುತ್ತಿದ್ದೇನೆ. ನೀವು ಕುಳಿತುಕೊಳ್ಳದೇ ಇದ್ದರೆ ನಾನು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ನೀವು ಕುಳಿತುಕೊಳ್ಳುತ್ತೀರೋ ಹೇಗೆ ? ಇಲ್ಲದಿದ್ದರೆ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ಯಾರು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಸ್ ಆರ್. ಬೊಮ್ಮಾಯಿ.—ಜಿಲ್ಲಾಪರಿಷತ್ ಕಾನೂನನ್ನು ಭಿನ್ನಾಭಿಪ್ರಾಯ ಇಲ್ಲದೆ ಎಲ್ಲರೂ ಒಮ್ಮತದಿಂದ ಪಾಸ್ ಮಾಡಿದ್ದೇವೆ. ಇಲ್ಲಿ ಸ್ವಲ್ಪ ಕೇಳಿ. ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಸಂಪೂರ್ಣವಾಗಿ ನಮಗೆ ನಂಬಿಕೆ ಇದೆ. ಅಲ್ಲಿ ಇಲ್ಲಿ ತಪ್ಪು ಮಾಡಿದ್ದರೆ ಕಾನೂನಿನಲ್ಲಿ ಅವಶ್ಯಕತೆ ಇದ್ದರೆ ತಿದ್ದುಪಡಿ ಮಾಡೋಣವೆಂದು ಹೇಳಿದ್ದೇನೆ. ಈಗ ಶ್ರೀ ರಾಮಪ್ಪನವರು ಹೇಳಿದ ಅಭಿಪ್ರಾಯವನ್ನು ಮುಖ್ಯ ಕಾರ್ಯದರ್ಶಿಯವರಿಗೆ ಕಳಿಸಿಕೊಡುತ್ತೇವೆ ಎಂದು ಹೇಳಿದ್ದೇವೆ. ದಯವಿಟ್ಟು ಇವು ಹೊಸದಾಗಿ ಬಂದಂಥ ಸಂಸ್ಥೆಗಳು ತಪ್ಪಾಗುತ್ತವೆ. ತಪ್ಪಾಗಿರುವುದಾದರೆ ತಿದ್ದುಪಡಿ ತರುವ ಬಗ್ಗೆ ಆಲೋಚನೆ ಮಾಡೋಣ.

ಶ್ರೀ ಆರ್. ಎನ್. ನಾಯಕ್.—ನಿಮ್ಮ ಹತ್ತಿರ ಅಧಿಕಾರ ಇಲ್ಲವೆಂದು ಹೇಳುತ್ತೀರಿ. ಮುಖ್ಯ ಕಾರ್ಯದರ್ಶಿಯವರಿಗೆ ಅಧಿಕಾರ ಇದೆಯಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಜಿಲ್ಲಾ ಪರಿಷತ್ತು ಮುಂದೆ ಇಡುತ್ತಾರೆ. ನಿಮಗೆ ಜನತಂತ್ರದಲ್ಲಿ ನಂಬಿಕೆ ಇಲ್ಲ, ಅಧಿಕಾರ ವಿಕೇಂದ್ರೀಕರಣದ ಬಗ್ಗೆ ನಂಬಿಕೆ ಇಲ್ಲ.

ಶ್ರೀ ಆರ್. ಎನ್. ನಾಯಕ್.—ನನ್ನನ್ನು ಏನು ಯಾರ ಮೇಲೂ ನಂಬಿಕೆ ಇಲ್ಲದ ಹುಚ್ಚ ಎಂದು ತಿಳಿದುಕೊಂಡಿದ್ದೀರೇನು ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅನ್ಯಾಯ ಆಗಿದೆ ಸರಿಪಡಿಸಿ ಎಂದರೆ, ನಿಮಗೆ ಅದರಲ್ಲಿ ನಂಬಿಕೆ ಇಲ್ಲ, ಇದರಲ್ಲಿ ನಂಬಿಕೆ ಇಲ್ಲ ಎಂದು ಹೇಳುತ್ತೀರಲ್ಲಾ ?

---

* ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಿಲ್ಲ.